**ಇಂದು ದಿನಾಂಕಃ 22-09-2025 ಸಾಕ್ಷಿ ಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ NCH ವಕೀಲರಿಂದಃ ಇಲ್ಲಾ.**

**ಪಾಟೀ ಸವಾಲುಃ 2ನೇ ಪ್ರತಿವಾದಿ ಪರವಾಗಿ ಶ್ರೀ KDP ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಶಪಥ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತು. ದಾವಾ ಜಮೀನಿನ ಪೂರ್ವಕ್ಕೆ ಸ.ನಂ. 50/8 ಇದೆ, ಪಶ್ಚಿಮಕ್ಕೆ ಸ.ನಂ. 50/7 ಇದೆ, ಉತ್ತರಕ್ಕೆ ಸ.ನಂ. 50/9/1 ಇದೆ ಮತ್ತು ದಕ್ಷಿಣಕ್ಕೆ ಸ.ನಂ. 50/9/4 ರ ಜಮೀನು ಇದೆ. ದಾವಾ ಜಮೀನನ್ನು ನಾನು ಗೌತಮ ಪಾಟೀಲರವರಿಂದ ಖರೀದಿ ಮಾಡಿದ್ದೇನೆ. ಸದರಿ ಗೌತಮ ಪಾಟೀಲರವರು ಯಾರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಗೌತಮ ಪಾಟೀಲರವರು ಮೊದಲು ZP ಸದಸ್ಯರಿದ್ದರು ಮತ್ತು ಅವರ ತಂದೆ MLA ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಜಮೀನು ಖರೀದಿಸುವ ಸಮಯಕ್ಕೆ ಗೌತಮ ಪಾಟೀಲರವರ ಹತ್ತಿರ ದಾವಾ ಜಮೀನಿನ ಕಬ್ಜ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಜಮೀನನ್ನು ಖರೀದಿ ಮಾಡುವ ಮೊದಲು ಪಂಚಾಯಿತಿ ಮಾಡಿದ್ದು ಅದರಲ್ಲಿ 2ನೇ ಪ್ರತಿವಾದಿ ದಾವಾ ಜಮೀನಿನ ಕಬ್ಜಯಲ್ಲಿ ಇದ್ದ ಕಾರಣ ಅವರಿಗೆ ಹಣ ನೀಡಬೇಕಾಗಿರುತ್ತದೆ ಎಂದು ನಿಶ್ಚಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ದಾವಾ ಜಮೀನಿನ ಕಬ್ಜಯಲ್ಲಿ ಇಲ್ಲದೇ ಇದ್ದರು ಸಹ ಈಗ ಕಬ್ಜಯನ್ನು ಪಡೆಯಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ದಾವಾ ಜಮೀನಿನ ಕಬ್ಜಯಲ್ಲಿದ್ದಾನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**